ಅ) 13,227 ನೌಕರರು ಕೆಲಸ ಕಳೆದುಕೊಂಡಿದ್ದಾರೆ.

ಇ) 11,170 (ಡಿಸೆಂಬರ್ 90ರ ಕೊನೆಯವರೆಗೆ)

ಈ) ಹೌದು.

**ಪ್ರತಿ ಹಳ್ಳಿಗಳಲ್ಲಿ ಸ್ಮಶಾನ ಜಾಗ ನಿಗಡಿಪಡಿಸುವ ಬಗ್ಗೆ**

1293 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪ್ರತಿ ಹಳ್ಳಿಗಳಲ್ಲೂ ಕಡ್ಡಾಯವಾಗಿ ಸ್ಮಶಾನ ಜಾಗಗಳನ್ನು ನಿಗದಿಪಡಿಸುವ ಬಗ್ಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳುವುದು.

**ಮುಜರಾಯಿ ದೇವಸ್ಥಾನಗಳ ಸಂಖ್ಯೆ**

1292 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು?*

*ಆ) ಈ ದೇವಸ್ಥಾನಗಳಿಗೆ ಬರುವ ವರಮಾನವೆಷ್ಟು?*

*ಇ) ಈ ದೇವಸ್ಥಾನಗಳ ಅಭಿವೃದ್ಧಿಯ ಬಗ್ಗೆ ಸರ್ಕಾರ ಸಮಗ್ರ ಯೋಜನೆಯನ್ನು ತಯಾರಿಸಿದೆಯೇ?*

*ಈ) ಈ ಮುಜರಾಯಿ ದೇವಸ್ಥಾನಗಳ ಅರ್ಚಕರ ಸಂಬಳ ಕಡಿಮೆ ಇರುವುದರಿಂದ ಜಾಸ್ತಿ ಮಾಡಲು ಸರ್ಕಾರ ಯೋಚಿಸಿದೆಯೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):

ಅ) 41366.

ಆ) ರೂ. 15,02,89,083-00.

ಇ) ಇಲ್ಲ.

ಈ) ಇಲ್ಲ. (ಅರ್ಚಕರ ಸಂಬಳ ಆಯಾ ದೇವಾಲಯದ ಆದಾಯಕ್ಕೆ ಅನುಗುಣವಾಗಿರುತ್ತದೆ. ದೇವಾಲಯದ ಆದಾಯಕ್ಕೂ ಮೀರಿ ಅರ್ಚಕರ ಸಂಬಳ ನೀಡಲು ಕಾಯ್ದೆಯಲ್ಲಿ ಅವಕಾಶ ಇಲ್ಲ).

**ಜಿಲ್ಲಾ ವಿಂಡಗಡಣೆಯ ಬಗ್ಗೆ**

1294 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸರ್ಕಾರಕ್ಕೆ ಜಿಲ್ಲಾ ವಿಂಗಡಣೆಯ ವರದಿ ಬಂದಿದೆಯೇ?*

*ಆ) ಈ ವರದಿಯಲ್ಲಿ ಗುರುತಿಸಿರುವ ಹೊಸ ಜಿಲ್ಲೆಗಳು ಯಾವು ಯಾವುವು?*

*ಇ) ಈ ಹೊಸ ಜಿಲ್ಲೆಗಳು ಯಾವ ಅಸ್ತಿತ್ವಕ್ಕೆ ಬರುತ್ತವೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಪಟ್ಟಿ ಲಗತ್ತಿಸಿದೆ.